



ಒಬ್ಬ ಮಹಿಳೆ ಡಾಕ್ಟರ್ ಬಳಿಗೆ ಹೋಗಿ 'ಇತ್ತೀಚೆಗೆ ನನಗೆ ತುಂಬಾ ಸುಸ್ತಾಗುತ್ತಿದೆ ಏನಾದರೂ ಔಷಧಿ ಕೊಡಿ ಡಾಕ್ಟ್ರೇ' ಎಂದು ಕೇಳಿದಳು.

ಡಾಕ್ಟರ್: 'ನಿಮಗೆ ಯಾವ ಕಾಯಿಲೆಯೂ ಇಲ್ಲ, ಸ್ವಲ್ಪ ರೆಸ್ಟ್ ಮಾಡಿ ಸರಿಹೋಗುತ್ತದೆ'.

ಡಾಕ್ಟರ್ ಮಾತಿನಿಂದ ಆಕೆಗೆ ಸಮಾಧಾನವಾಗಲಿಲ್ಲ. 'ನಾಲಿಗೆ ನೋಡಿ ಕಾಯಿಲೆ ಏನೆಂದು ಹೇಳಿ ಡಾಕ್ಟ್ರೇ' ಎಂದಳು.

ಡಾಕ್ಟರ್ ಅವಳ ನಾಲಿಗೆಯನ್ನು ಪರೀಕ್ಷಿಸಿ 'ಇದಕ್ಕೂ ಸ್ವಲ್ಪ ರೆಸ್ಟ್ ಬೇಕೇ ಬೇಕು ಮೇಡಂ' ಎಂದರು.

★★★

ತಿಮ್ಮನ ಮನೆಯಲ್ಲಿ ಕಳುವಾಯಿತು. ತಿಮ್ಮ ಪೊಲೀಸ್ ಸ್ಟೇಷನಿಗೆ ಫೋನ್ ಮಾಡಿದ.

ಫೋನ್ ರಿಸೀವ್ ಮಾಡಿದ ಇನ್ಸ್‌ಪೆಕ್ಟರ್ 'ಈಗ ತುಂಬಾ ಜೋರಾಗಿ ಮಳೆ ಬರುತ್ತಿದೆ. ಮಳೆ ನಿಂತ ಮೇಲೆ ನಾನು ಬರುತ್ತೇನೆ' ಎಂದು ಹೇಳಿದರು.

ಅದನ್ನು ಕೇಳಿ ತಿಮ್ಮನಿಗೆ ಕೋಪ ಬಂತು. 'ನಿಮಗಿಂತ ಆ ಕಳ್ಳರೇ ಎಷ್ಟೋ ವಾಸಿ ಸಾರ್. ಮಳೆಯಲ್ಲೂ ತಮ್ಮ ಡ್ಯೂಟಿಯನ್ನು ಸರಿಯಾಗಿ ಮಾಡುತ್ತಾರೆ' ಎಂದು ದಬಾಯಿಸಿದ.

★★★

ಮಾರ್ವಾಡಿ ಬನವಾರಿಲಾಲ ತುಂಬ ಜಿಪುಣ. ಆತನಿಗೆ ಮನೆಗೆಲಸಕ್ಕೆ ಒಬ್ಬ ಆಳು ಬೇಕಾಗಿತ್ತು. ಆದರೆ ಆಳನ್ನು ಇಟ್ಟುಕೊಂಡರೆ ಅವರು ದುಂದುವೆಚ್ಚ ಮಾಡುತ್ತಾರೆ ಎಂದು ಇಟ್ಟುಕೊಳ್ಳಬೇಕೋ ಬೇಡವೋ ಎಂಬ ದ್ವಂದ್ವದಲ್ಲಿರುವಾಗಲೇ ಒಬ್ಬ ಹುಡುಗ ಕೆಲಸ ಕೇಳಿಕೊಂಡು ಆತನ ಬಳಿ ಬಂದ.

'ನೀನು ದುಂದು ವೆಚ್ಚ ಮಾಡಲ್ಲ ಎನ್ನಲು ಏನು ಪುರಾವೆ ಇದೆ?' ಲಾಲ್ ಆತನನ್ನು ಕೇಳಿದ.

'ಸೇಠ್ ಜೀ, ನಾನು ದುಂದುವೆಚ್ಚ ಮಾಡುವುದಿಲ್ಲ ಎನ್ನುವುದಕ್ಕೇ ನನ್ನ ಮೊದಲನೆಯ ಕೆಲಸವನ್ನು ಕಳೆದುಕೊಳ್ಳಬೇಕಾಯಿತು' ಎಂದ ಆ ಹುಡುಗ.

'ಅದು ಹೇಗೆ?' ಲಾಲ್ ಪ್ರಶ್ನಿಸಿದ.

'ದುಂದುವೆಚ್ಚ ಆಗಬಾರದೆಂದು ನಾನು ನನ್ನ ಬಟ್ಟೆಗಳಿಗೆ ಬದಲು ಯಜಮಾನರ ಬಟ್ಟೆಗಳನ್ನು ಧರಿಸುತ್ತಿದ್ದೆ' ಎಂದನಾತ.

(ಸಂ)-ಮುರಲೀಧರ ಕುಲಕರ್ಣಿ, ಬೀದರ್

## ಬದಲಾವಣೆ ಇಲ್ಲ

ಹವಾಮಾನ ತಜ್ಞರ ಕಚೇರಿಯ ಮುಂದೆ ತೂಗು ಹಾಕಲಾದ ಸೂಚನಾ ಫಲಕ: 'ದೀಪಾವಳಿಯ ನಿಮಿತ್ತ ಕಚೇರಿಗೆ ಮೂರು ದಿನಗಳ ರಜೆ ಇರುವುದರಿಂದ, ಈ ಮೂರೂ ದಿನಗಳಲ್ಲಿ ಹವಾಮಾನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.'

★★★

## ಕಾರಣ




ಶಿಕ್ಷಕ: ಚಂದ್ರನ ಮೇಲೊಂದು ಪ್ರಬಂಧ ಬರೆ ಎಂದರೆ ಸುಮ್ಮನೆ ಕೈ ಕಟ್ಟಿ ಕುಳಿತಿರುವೆಯಲ್ಲ?

ತಿಂಗ: ಹೇಗೆ ಬರೆಯಲಿ ಸಾರ್?

ಶಿಕ್ಷಕ: ಏಕೆ, ಏನಾಯ್ತು?

ತಿಂಗ: ಇಂದು ಅಮಾವಾಸ್ಯೆ ಸಾರ್.

-ಸೋಮನಾಥ ಎಸ್. ಕರ್ಕೇರ, ಮುಂಬೈ


